ಮುಖಾಂತರ ಸುಲಭ ಬೆಲೆಯಲ್ಲಿ ದುರ್ಬಲವರ್ಗದವರಿಗೆ ಹಾಗೂ ಬಡವರ್ಗದವರಿಗೆ ಹಂಚುವ ಒಂದು ವ್ಯವಸ್ಥೆ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ನನಗೆ ಕಳಪೆ ಗೋಧಿ ಏನು ಕಳುಹಿಸಿ ಕೊಟ್ಟಿದ್ದಾರೋ ಮತ್ತು ಅದರಲ್ಲಿ ಏನು ಲೋಪದೋಷಗಳು ಇವೆ ಅನ್ನುವುದನ್ನು ಕಂಡುಹಿಡಿದು ತಪ್ಪಿತಸ್ಥರ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

(viii) ಜಿಲ್ಲಾ ಸಹಕಾರಿ ಬ್ಯಾಂಕ್ ನೌಕರರ ಮುಷ್ಕರ

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈಗ ಸುಮಾರು ೬ ಸಾವಿರ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನೌಕರರು ಏನು ಮುಷ್ಕರ ಹೂಡಿದ್ದಾರೆ ಅದರ ಬಗ್ಗೆ ನನಗೆ ಟೋಟಲ್ ಸಕ್ಸಸ್ ಅನ್ನುವ ಟೆಲಿಗ್ರಾಂ ಬಂದಿದೆ. ಬೆಂಗಳೂರಿನಿಂದ ಬಂದಿದೆ, ಧಾರವಾಡದಿಂದ ಬಂದಿದೆ ಇನ್ನೂ ಇತರ ಬೇರೆ ಬೇರೆ ಕಡೆಗಳಿಂದ ಟೆಲಿಗ್ರಾಂ ಬಂದಿದೆ. ಡಿಮ್ಯಾಂಡ್ ಏನು ಎಂದರೆ, ಸರ್ಕಾರದವರು ಅವರ ಬ್ಯಾಂಕ್‌ನಲ್ಲಿ ಅಲ್ಲಿರುವ ನೌಕರರಿಗೆ ಏನು ಒಂದು ಸ್ಕೇಲ್ ಕೊಡುತ್ತಾ ಇದ್ದಾರೋ ಅದೇ ಸ್ಕೇಲನ್ನು ನಮಗೂ ಕೊಡಬೇಕು ಅಂತ ಕೇಳುತ್ತಿದ್ದಾರೆ. ಸರ್ಕಾರದವರು ಇದನ್ನು ಪರಿಶೀಲಿಸುತ್ತೇವೆ, ಪರಿಶೀಲಿಸುತ್ತೇವೆ ಅಂತ ಹೇಳಿಕೊಂಡು ಕೊನೆಗೆ ಇದಕ್ಕೆ ಒಂದು ಸಬ್ ಕಮಿಟಿ ಮಾಡಿದರು. ಅದರಲ್ಲಿ ಎಲ್ಲಾ ಜಿಲ್ಲಾ ಬ್ಯಾಂಕ್ ಅಧ್ಯಕ್ಷರೂ ಸೇರಿ ಇದರ ಬಗ್ಗೆ ಒಂದು ಇತ್ಯರ್ಥ ಮಾಡಿದರೆ ಚೆನ್ನಾಗಿತ್ತು. ಈ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಹಿಂದೆ ಕಾರವಾರ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ಅವರು ತಮ್ಮ ನೌಕರರಿಗೆ ಏನು ಹೇಳಿದರು ಎಂದರೆ ನೀವು ಚಳುವಳಿ ಮಾಡುವುದು ಬೇಡ, ನಿಮಗೆ ನಾವು ಸರ್ಕಾರೀ ನೌಕರರ ಸ್ಕೇಲನ್ನೇ ಕೊಡುತ್ತೇವೆ ಅಂತ ಹೇಳಿ ಕೊಡುತ್ತಾ ಬಂದರು. ಬೇರೆಯವರು ಸಹ ಇದೇ ಸ್ಕೇಲನ್ನು ಕೊಡಬೇಕೆಂದು ಒತ್ತಾಯ ಮಾಡಿದಾಗ ಅದಕ್ಕೆ ರಿಜಿಸ್ಟ್ರಾರ್‌ರವರು ಅಡ್ಡಿ ಬರುತ್ತಾರೆ ಅಂತ ಹೇಳಿದರು. ಈ ತರಹ ಒಂದು ಕಡೆ ಕೊಟ್ಟು ಇನ್ನೊಂದು ಕಡೆಗೆ ಅಡ್ಡಿ ಬರುವ ಹಾಗೆ ವರ್ತಿಸುವುದು ಏತಕ್ಕೆ ? ಇದನ್ನು ನಾನು ಒಪ್ಪುವುದಿಲ್ಲ. ಎಲ್ಲರಿಗೂ ಸರ್ಕಾರೀ ಪೇಸ್ಕೇಲ್‌ನ್ನು ಕೊಡುವ ಹಾಗೆ ಮಾಡಬೇಕು ಮತ್ತು ಅವರು ಈಗ ಏನು ಒಂದು ಚಳುವಳಿ ಹೂಡಿದ್ದಾರೆ ಅದನ್ನು ಬೇಗನೆ ಇತ್ಯರ್ಥ ಮಾಡುವ ಹಾಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಆರ್. ಎಲ್. ಜಾಲಪ್ಪ ನವರು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ೧೯೮೦ರಲ್ಲಿ ಒಂದು ಅಗ್ರಿಮೆಂಟ್ ಆಗಿತ್ತು. ಎಲ್ಲಾ ಬ್ಯಾಂಕ್‌ನವರೂ ಕೂಡ ಈ ರೀತಿಯಾದ ಒಂದು ಸ್ಕೇಲ್ ಕೊಡಬೇಕು ಎಂದು ಅಗ್ರಿಮೆಂಟ್ ಆಗಿ ಅದರಂತೆ ಕೊಡುತ್ತಾ ಇದ್ದರು. ಆವಾಗ ಇದರ ಬಗ್ಗೆ ಯಾವ ರೀತಿಯಾದ ಒಂದು ವೈಜ್ಞಾನಿಕತೆಯೂ ಇರಲಿಲ್ಲ. ಅಲ್ಲದೆ ೧೯೮೦ರಲ್ಲಿ ಇದರ ಬಗ್ಗೆ ಒಂದು ಸಮಿತಿಯನ್ನು ರಚಿಸಿದರು. ಇದಕ್ಕೆ ರಾಜ್ಯದ ಅಪೆಕ್ಸ್ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಅವರ ನೇತೃತ್ವದಲ್ಲಿ ೧೯ ಜಿಲ್ಲಾ ಬ್ಯಾಂಕ್ ಅಧ್ಯಕ್ಷರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿದರು. ಅವರು ಇದರ ಬಗ್ಗೆ ತಮ್ಮ ತೀರ್ಮಾನವನ್ನು ಕೊಟ್ಟರು. ಅದನ್ನು ಜಿಲ್ಲಾ ಬ್ಯಾಂಕ್‌ಗೆ ಕಳುಹಿಸಿದರು. ಅದಕ್ಕೆ ಅವರು ನಮ್ಮ ಆಡಳಿತ ಮಂಡಲಿಯ ಮುಂದೆ ಇಟ್ಟು ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅದನ್ನು ತಿಳಿಸುತ್ತೇನೆಂದು ಹೇಳಿದರು. ಇದರ ಬಗ್ಗೆ ರಿಜಿಸ್ಟ್ರಾರ್‌ರವರನ್ನು ಕೇಳಿದರು. ಆದರೆ ಆ ಬ್ಯಾಂಕ್‌ನವರು ಇಲ್ಲಿಯವರೆಗೂ ಪತ್ರವನ್ನು ಬರೆಯಲಿಲ್ಲ. ಮತ್ತೆ ಇದರ ಬಗ್ಗೆ ವೆಂಕಟರಮಣೆಗೌಡರ ಒಂದು ಸಮಿತಿ ಮಾಡಿತು. ಅವರ ವರದಿಯನ್ನು ನೋಡಿ ಅವರು ಏನು ಒಂದು ಪತ್ರ ಬರೆದಿದ್ದಾರೆ ಎಂದರೆ ಇದು ಸರಿಯಾಗಿಲ್ಲ, ನಾವೇನು ಇವರಿಗೆ ಸಂಬಳ ಕೊಡುತ್ತಾ ಇದ್ದೇವೋ ಅದಕ್ಕೆ ಹೋಲಿಸಿ ನೋಡಿದರೆ ಇವರು ಮೊದಲಿಗಿಂತಲೂ ಕಡಿಮೆ ತೆಗೆದುಕೊಳ್ಳುತ್ತಾರೆ ಅದಕ್ಕಾಗಿ ಇದನ್ನು ಪುನಃ ಪರಿಶೀಲಿಸಬೇಕು ಎಂದು ಪತ್ರವನ್ನು ಬರೆದಿದ್ದಾರೆ. ಅನಂತರ ನಮ್ಮ ರಿಜಿಸ್ಟ್ರಾರ್‌ರವರು ಎಲ್ಲಾ ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷರನ್ನು ಕರೆಸಿ ಸಮಾಲೋಚನೆ ಮಾಡಬೇಕೆಂದು ತೀರ್ಮಾನಿಸಿ ಅವರು ೧೨–೧೨–೧೯೮೩ರಂದು ಸಮ್ಮೇಳನವನ್ನು ಮಾಡಿದರು. ಆ ಸಮ್ಮೇಳನದಲ್ಲಿ ಜಿಲ್ಲಾ ಬ್ಯಾಂಕ್ ಅಧ್ಯಕ್ಷರುಗಳೊಂದಿಗೆ ಚರ್ಚೆ ಮಾಡಿದಾಗ ಅವರು ನಾವು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ ಅಂತ ಹೇಳಿದರು. ಮತ್ತೆ ಇದನ್ನು ೩ನೇ ತಾರೀಖಿಗೆ ಇಟ್ಟಿದ್ದಾರೆ. ೩ನೇ

ತಾರೀಖು ಆ ಸಭೆ ಸೇರುತ್ತದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಮಾನ್ಯ ಕೃಷ್ಣನ್ ರವರು ಹೇಳಿದ ಹಾಗೆ ಅವರು ೨-೩ ವಿಷಯಗಳನ್ನು ಮುಖ್ಯವಾಗಿ ಹೇಳಿದ್ದಾರೆ. ಅದರಲ್ಲಿ ಮುಖ್ಯವಾದುದು ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂದು. ಅದು ಸಾಧ್ಯವಿಲ್ಲದೇ ಇರುವ ಕೆಲಸ. ಸರ್ಕಾರಿ ಬ್ಯಾಂಕ್‌ನಲ್ಲಿ ಕೆಲಸ ಮಾಡತಕ್ಕಂಥಾ ನೌಕರರಿಗೂ, ಸಹಕಾರೀ ಬ್ಯಾಂಕ್ ನಲ್ಲಿ ಕೆಲಸ ಮಾಡತಕ್ಕಂಥಾ ನೌಕರರಿಗೂ ವ್ಯತ್ಯಾಸ ಇದೆ. ಈ ಸಹಕಾರೀ ಬ್ಯಾಂಕುಗಳಲ್ಲಿ ಲಾಭ ಬಂದರೆ ಅವರಿಗೆ ಸಂಬಳವನ್ನು ಹೆಚ್ಚು ಮಾಡಬೇಕಾಗುತ್ತದೆ. ತಮಗೆ ಹೇಳಬೇಕಾದರೆ ಕಳೆದ ೩ ವರ್ಷದಿಂದಲೂ ಕೂಡ ಈ ಬ್ಯಾಂಕುಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಿವೆ ಎಂದರೆ ಒಟ್ಟು ೧೯ ಬ್ಯಾಂಕುಗಳಲ್ಲಿ ೬ ಬ್ಯಾಂಕುಗಳು ಮಾತ್ರ ಚೆನ್ನಾಗಿ ಕೆಲಸ ಮಾಡಿವೆ. ಕೆಲವು ಡಿಫಾಲ್ಟರ್ ಸಹ ಆಗಿವೆ. ಈ ಬ್ಯಾಂಕುಗಳನ್ನು ಯಾವ ಷೇರುದಾರರು ಪ್ರಾರಂಭ ಮಾಡಿದರೋ ಅವರ ಗತಿ ಏನು ? ಬಹಳ ಬ್ಯಾಂಕುಗಳು ಲುಕ್ಸಾನಿನಲ್ಲಿ ನಡೆಯುತ್ತದೆ. ಇವೆಲ್ಲಾ ನಾವು ಯೋಜನೆ ಮಾಡಬೇಕಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ನಾನೇನೂ ಕಾರ್ಮಿಕರ ವಿರೋಧಿ ಅಲ್ಲ. ಅವರು ಹೆಚ್ಚು ಕೆಲಸ ಮಾಡಿ ಹೆಚ್ಚು ಲಾಭ ಗಳಿಸುವ ಹಾಗೆ ಮಾಡಿದರೆ ಅವರಿಗೆ ಹೆಚ್ಚು ಸಂಬಳ ಕೊಡುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಸಿರಸಿ ಬ್ಯಾಂಕ್‌ನಲ್ಲಿ ಹೆಚ್ಚು ಸಂಬಳ ಕೊಟ್ಟಿದ್ದಾರೆ ಅನ್ನುವ ವಿಷಯ ನನಗೆ ನಿನ್ನೆ ತಾನೇ ನನ್ನ ಗಮನಕ್ಕೆ ಬಂತು. ತಾವು ನಿಯಮ ೩೩ರ ಒಂದು ಸೂಚನೆಯನ್ನು ಕಳುಹಿಸಿದ್ದ ಮೇಲೆ ಅಧಿಕಾರಿಗಳನ್ನು ಕರೆಸಿ ಹೇಳಿದಾಗ ಅವರು ಅದರ ಒಂದು ಕಾಪಿಯನ್ನು ತರಿಸಿದ್ದಾರೆ ಆದರೆ ಆ ಬಗ್ಗೆ ನಾವು ಯೂನಿಲಾಟಿರಲ್ ಆಗಿ ಮಾಡುವುದಕ್ಕೆ ಬರುವುದಿಲ್ಲ. ತಮಗೆ, ಹೇಳಬೇಕೆಂದರೆ ಅವರಿಗೆ ಸಂಬಳಜಾಸ್ತಿ ಮಾಡಬೇಕಾಗಿದ್ದರೆ ರಿಜಿಸ್ಟ್ರಾರ್‌ರವರ ಪೂರ್ವಾನುಮತಿ ಬೇಕು ಆದರೆ ಅವರು ಪೂರ್ವಾನುಮತಿ ತೆಗೆದುಕೊಳ್ಳದೇ ಮಾಡಿದ್ದಾರೆ. ನನಗೆ ಇದರ ಬಗ್ಗೆ ಏನು ಅನಿಸುತ್ತದೆ ಅಂದರೆ ಬಹಶಃ ಅವರು ಈ ರೀತಿ ಯೋಚನೆ ಮಾಡಿರಬಹುದು. ಕೆಲವು ಬ್ಯಾಂಕ್‌ಗಳಲ್ಲಿ ಲಾಭದಾಯಕವಾಗಿ ಕೆಲಸ ಮಾಡುತ್ತಾ ಇಲ್ಲ. ಆದರೆ ಈ ಉತ್ತರ ಕನ್ನಡದ ಈ ಬ್ಯಾಂಕ್ ಏನು ಇದೆ ಅದರಲ್ಲಿ ನಮಗೆ ಆದಾಯ ಬಂದಿರುವುದರಿಂದ ನಾವು ಅವರಿಗೆ ಸಂಬಳ ಜಾಸ್ತಿ ಕೊಡಬಹುದು ಎಂದು ಯೋಚನೆ ಮಾಡಿ ಕೊಟ್ಟಿರಬಹುದು ಎಂದು ನನಗೆ ಕಾಣುತ್ತದೆ. ಆದರೂ ಸಹ ಅದು ರಿಜಿಸ್ಟ್ರಾರ್ ರವರ ಅನುಮತಿಗೆ ಬರಲೇಬೇಕು. ಬಂದಾಗ ಅದರ ಪೂರ್ಣ ಪರಿಶೀಲನೆ ಮಾಡಿ ಸಾಧ್ಯವಾದರೆ ಮಾಡಿಕೊಡುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ತಮಗೆ ಕೊಡಬಲ್ಲೆ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ನನ್ನ ಪ್ರಶ್ನೆ ಆ ಬ್ಯಾಂಕ್‌ನವರು ತಮ್ಮ ನೌಕರರಿಗೆ ಹೆಚ್ಚು ಸಂಬಳ ಕೊಡುವುದಾದರೆ ಈ ರಿಜಿಸ್ಟ್ರಾರ್‌ರವರು ಮಧ್ಯೆ ಏತಕ್ಕೆ ಅಡ್ಡಿ ಬರಬೇಕೆನ್ನುವುದೇ ನನ್ನ ಪ್ರಶ್ನೆ.

ಶ್ರೀ ಆರ್.ಎಲ್. ಜಾಲಪ್ಪ.—ಹಾಗಾದರೆ ಎಲ್ಲರೂ ಕೊಡಿ ಎಂದು ಕೇಳಿದರೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ? ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯ ತರಬೇಕಾದರೆ ಗುಲ್ಬರ್ಗಾ ದಲ್ಲಿ ೪೦ ಪರ್ಸೆಂಟ್ ರಿಕವರಿ ಆಗುವ ಬದಲು ೪೦ ಲಕ್ಷ ಅಕ್ಯುಮಲೇಟೆಡ್ ಲಾಸ್ ಆಗಿದೆ. ಅದಕ್ಕೇನೂ ಹೇಳುತ್ತೀರಾ ? ಎಷ್ಟೋ ಬ್ಯಾಂಕುಗಳಲ್ಲಿ ರಿಕವರಿ ಬಹಳ ಕಡಿಮೆ ಆಗಿದೆ. ಹೀಗೆ ಕಡಿಮೆಯಾದರೆ ಲಾಭ ಬರದೇ ಲುಕ್ಸಾನು ಆಗಿದ್ದರೆ ಅವರಿಗೆ ಸಂಬಳ ಹೆಚ್ಚು ಹೇಗೆ ಕೊಡುವುದಕ್ಕಾಗುತ್ತದೆ ? ಷೇರ್ ಹೋಲ್ಡರ್ಸ್ ಗತಿ ಏನು ? ಶಿವಮೊಗ್ಗ, ಚಿಕ್ಕಮಗಳೂರು ಇನ್ನು ಇತರೇ ಕಡೆಗಳಲ್ಲಿ ರಿಕವರಿಯೂ ಕಡಿಮೆ, ಲಾಭವೂ ಇಲ್ಲ ಜೊತೆಗೆ ಲುಕ್ಸಾನು ಸಹ ಆಗಿದೆ. ಆದರೆ ಬೆಂಗಳೂರು ಜಿಲ್ಲಾ ಬ್ಯಾಂಕ್‌ನಲ್ಲಿ ಅಲ್ಪಸ್ವಲ್ಪ ಲಾಭ ಬಂದಿದೆ. ಹೀಗಿರುವುದರಿಂದ ಅವರಿಗೆ ಹೆಚ್ಚು ಸಂಬಳ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಪೂರ್ಣ ಚರ್ಚೆ ಮಾಡಬೇಕಾಗುತ್ತದೆ. ತಮಗೆ ಹೇಳಬೇಕಾದರೆ ೩ನೇ ತಾರೀಖು ಜಿಲ್ಲಾ ಬ್ಯಾಂಕ್ ಅಧ್ಯಕ್ಷರ ಒಂದು ಸಭೆ ಸೇರುತ್ತದೆ. ಅಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲಿಗೆ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರನ್ನೂ ಸಹ ಕರೆಸಿ ಮಾತನಾಡಿ ಅವರಿಗೆ ಎಷ್ಟರಮಟ್ಟಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದನ್ನು ನೋಡಬೇಕಾಗುತ್ತದೆ. ಅಧ್ಯಕ್ಷರೇ, ಈ ಸಭೆಗೆ ತಿಳಿಸುವುದೇನೆಂದರೆ ಮಾತೆತ್ತಿದರೆ ಸ್ಟ್ರೈಕ್ ಅಂತ ಮಾಡುವುದು ತಪ್ಪು ಎಂದು ಹೇಳುತ್ತೇನೆ. ಏತಕ್ಕೆಂದರೆ ಒಳ್ಳೆಯ ಬೆಳೆ ಬಂದಾಗಲೂ ಕೂಡ ಕೊಟ್ಟಿರುವ ಸಾಲವನ್ನು ಸಂಪೂರ್ಣವಾಗಿ ವಸೂಲ್ಮಾಡದೆ ಹೋದರೆ ಆ ನೌಕರರಿಗೆ ಸಂಬಳ ಕೊಡುವುದು ಹೇಗೆ, ಇದನ್ನು ಯೋಚನೆ ಮಾಡಬೇಕು?

ಶ್ರೀ ಎಂ.ಎಸ್. ಕೃಷ್ಣನ್,—ಮಾನ್ಯ ಸಚಿವರಾದ ಶ್ರೀ ಆರ್. ಎಲ್. ಜಾಲಪ್ಪನವರು ಈ ರೀತಿಯಾಗಿ ಮಾತನಾಡುತ್ತಾರೆಂದು ನಾನು ತಿಳಿದಿರಲಿಲ್ಲ. ಅವರು ಸ್ಟ್ರೈಕ್ ಮಾಡಿದ್ದು ಬಹಳ ದಿವಸದಿಂದ ಕಾದು ಕಾದು ತಮ್ಮ ಮನವಿಗಳನ್ನೆಲ್ಲಾ ಅರ್ಪಿಸಿ ಸಾಕಾಗಿರುವುದರಿಂದ ಕೊನೇಗೆ ಸ್ಟ್ರೈಕ್‌ಮಾಡಿದ್ದು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಎಂ. ಎಸ್. ಕೃಷ್ಣನ್‌ನವರಿಗೆ ನಾನು ಹೇಳುವುದೇನೆಂದರೆ ಹಾಗೆಂದು ನಾನು ಹೇಳಿದ ಮಾತ್ರಕ್ಕೆ ನಾನು ಕಾರ್ಮಿಕ ವಿರೋಧಿ ಅಲ್ಲ. ಸರಿಯಾಗಿ ಬೆಳೆ ಬಂದಾಗಲೂ ಕೂಡ ಇವರು ಸ್ಟ್ರೈಕ್ ಮಾಡಿ ಸರಿಯಾಗಿ ರಿಕವರಿ ಮಾಡದೇ ಹೋದರೆ ಅವರಿಗೆ ಸಂಬಳ ಕೊಡುವುದು ಹೇಗೆ ಮತ್ತು ಬಹಳ ಲುಕ್ಸಾನು ಬಂದಾಗ ಆ ಬ್ಯಾಂಕನ್ನು ಲಿಕ್ವಿಡೇಟ್ ಮಾಡುವ ಸಂದರ್ಭ ಬರುತ್ತದೆ. ಅದರಿಂದ ನಾನು ಆ ರೀತಿ ಹೇಳಿದ್ದು. ಅಪೆಕ್ಸ್ ಬ್ಯಾಂಕ್‌ನವರು ನೇರವಾಗಿ ಫೈನಾನ್ಸ್ ಮಾಡಬೇಕಾಗುತ್ತದೆ. ಈ ಒಂದು ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಈ ಸಭೆಯ ಮೂಲಕ ನಾನು ಆ ಬ್ಯಾಂಕ್ ನೌಕರ ಬಾಂಧವರಲ್ಲಿ ಕೇಳಿಕೊಳ್ಳುವುದು ಏನೆಂದರೆ, ಅವರು ಕೈಗೊಂಡಿರುವ ಮುಷ್ಕರವನ್ನು ಕಾಲ್ ಆಫ್ ಮಾಡಿ ಬ್ಯಾಂಕಿನ ರಿಕವರಿಯ ಕಡೆಗೆ ಗಮನ ಕೊಡಬೇಕು. ಮೂರನೆಯ ತಾರೀಖು ಜಿಲ್ಲಾ ಬ್ಯಾಂಕಿನ ಅಧ್ಯಕ್ಷರುಗಳು ಒಂದು ಸಭೆ ಸೇರಿ ಅಲ್ಲಿ ಎಲ್ಲರೂ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದಮೇಲೆ ಅದನ್ನು ನಾವು ಅನುಸರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಡಿ. ಚೌಡಯ್ಯ.—ರಾಜ್ಯದಲ್ಲಿ ೧೯ ಜಿಲ್ಲಾ ಬ್ಯಾಂಕುಗಳಿದ್ದು ಪ್ರತಿಯೊಂದು ಬ್ಯಾಂಕ್ ಸಹ ತನ್ನದೇ ಆದಂಥ ಅಡ್ಮಿನಿಸ್ಟ್ರೇಟಿವ್ ಸೆಟ್ ಅಪ್ ಇದ್ದು ಅವು ಸರ್ವ ಸ್ವತಂತ್ರವಾಗಿವೆ, ಆದ್ದರಿಂದ ತಾವು ಎಲ್ಲಾ ಬ್ಯಾಂಕಿನ ಸಮಸ್ಯೆಗಳನ್ನು ಪೂಲ್ ಮಾಡಿಕೊಂಡು ಉತ್ತರ ಕೊಡುತ್ತಿದ್ದಿರಿ. ಶಿರಸಿ ಬ್ಯಾಂಕ್‌ನವರು ಹೆಚ್ಚಿನ ಸಂಬಳ ಸಾರಿಗೆಗಳನ್ನು ಕೊಟ್ಟರೆ ಅದು ಆ ಬ್ಯಾಂಕ್‌ನ ಕೆಪಾಸಿಟಿ ಇದ್ದುದರಿಂದ, ಮತ್ತು ಮಂಡ್ಯಾ ಜಿಲ್ಲಾ ಬ್ಯಾಂಕ್‌ನವರು ಕೊಟ್ಟರೆ ಅದೂ ಅವರ ಬ್ಯಾಂಕ್‌ನ ಕೆಪಾಸಿಟಿಯಿಂದ ಮಾಡುತ್ತಾರೆ ಕೊಡುವುದಕ್ಕೆ ಶಕ್ತಿ ಇರುವವರು ಕೊಡಲಿ ನೀವು ಅವರಿಗೆ ಅಡ್ಡ ಹೋಗುವುದು ಬೇಡ. ಈ ಬ್ಯಾಂಕುಗಳನ್ನು ತಾವು ಎಬಿಸಿ ಎಂದು ಈಗಾಗಲೇ ವರ್ಗೀಕರಣ ಮಾಡಿದ್ದೀರಿ, ಇಲ್ಲಿ (ಎ) ಕ್ಲಾಸ್ ಬ್ಯಾಂಕ್‌ನವರು ಹೆಚ್ಚಿನ ಸಂಬಳಗಳನ್ನು ತಮ್ಮ ನೌಕರರುಗಳಿಗೆ ಕೊಡುವುದಕ್ಕೆ ಸಾಧ್ಯವಾಗಬಹುದು, ಕೆಲವು (ಸಿ) ಕ್ಲಾಸ್ ಬ್ಯಾಂಕ್‌ನವರು ಕೊಡುವುದಕ್ಕೆ ಸಾಧ್ಯವಾಗದೇ ಇರಬಹುದು. ಅವರು ಈಗ ಮುಷ್ಕರ ಹೂಡಿರುವುದರಿಂದ ಬ್ಯಾಂಕಿನ ಕೆಲಸಕಾರ್ಯಗಳು ಸ್ಥಗಿತಗೊಂಡಿವೆ. ಆದ್ದರಿಂದ ತಾವು ಸಮಸ್ಯೆಗಳನ್ನು ಪೂಲ್ ಮಾಡುವುದಕ್ಕೆ ಹೋಗಬೇಡಿ ಅವರವರ ಸಮಸ್ಯೆಗಳನ್ನು ಅವರವರಿಗೆ ಬಿಟ್ಟುಬಿಡಿ.

ಶ್ರೀ ಆರ್. ಎಲ್. ಜಾಲಪ್ಪ.—ಎ ಕ್ಲಾಸ್ ಬ್ಯಾಂಕ್‌ನವರು ತಮ್ಮ ಆದಾಯವನ್ನು ನೋಡಿಕೊಂಡು ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿಕೊಳ್ಳಬಹುದು. ಆದರೆ ಎಲ್ಲಾ ಬ್ಯಾಂಕ್‌ನ ನೌಕರರು ನೌಕರರೇ. ಆದ್ದರಿಂದ ಎಲ್ಲಾ ಬ್ಯಾಂಕುಗಳ ಅಧ್ಯಕ್ಷರ ಸಭೆ ಸೇರುವುದಿದ್ದು ಈ ವಿಷಯದ ಕಡೆ ಅವರು ಗಮನವನ್ನು ಹರಿಸಬೇಕು ಎಂದು ನಾನಾಗಲೇ ತಿಳಿಸಿದ್ದೇನೆ. ಬಹಳ ದಿವಸಗಳಿಂದ ಈ ಒಂದು ಸಮಸ್ಯೆ ಇದ್ದು ನಾವು ಮಧ್ಯೆ ಪ್ರವೇಶ ಮಾಡಬೇಕಾಗಿದೆ ಎಂದು ನಾನು ಅವರಿಗೆ ಹೇಳಿದ್ದೇನೆ. ಸರ್ಕಾರದವರು ಪ್ರತಿಯೊಂದು ಕಾಸಿಗೂ ಸಹ ಗ್ಯಾರಂಟಿಯನ್ನು ಅವರಿಗೆ ಕೊಟ್ಟಿರುವಾಗ ನಾವು ಸಮಸ್ಯೆಗಳ ಕಡೆ ಗಮನ ಕೊಡಲೇಬೇಕು. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಕೆಲವು ಬ್ಯಾಂಕುಗಳವರು ಅವರ ಮನಸ್ಸಿಗೆ ಬಂದ ಹಾಗೆ ಸಂಬಳಗಳನ್ನು ಕೊಟ್ಟುಕೊಂಡು ಹೋದರೆ, ಈ ಬ್ಯಾಂಕುಗಳಲ್ಲಿ ಬಂಡವಾಳ ಹೂಡಿರತಕ್ಕವರಿಗೂ ಸಹ ಡಿವಿಡೆಂಟ್ ಸಿಕ್ಕಬೇಕು. ಇದನ್ನೂ ಸಹ ಮಾನ್ಯ ಸದಸ್ಯರುಗಳು ಯೋಚನೆ ಮಾಡಬೇಕು.

ಶ್ರೀ ಪಿ. ರಾಮ್‌ದೇವ್.—ರಾಜ್ಯದಲ್ಲಿ ಬೆಲೆಗಳ ಏರಿಕೆಯಿಂದಾಗಿ ಶ್ರೀಸಾಮಾನ್ಯನು ತತ್ತರಿಸಿ ಹೋಗುತ್ತಿದ್ದಾನೆ. ಈ ವಿಚಾರವನ್ನು ನಾನು ಸರ್ಕಾರದ ಮುಂದೆ ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು.—ಇದು ಬಹಳ ದೀರ್ಘವಾದ ವಿಚಾರ.

ಶ್ರೀ ಬಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಸುಗ್ಗಿಯ ಕಾಲವಾದರೂ ಕೂಡ ಎಲ್ಲಾ ಅವಶ್ಯಕ ಸಾಮಗ್ರಿಗಳ ಬೆಲೆಗಳು ಏರಿವೆಯೆಂದು ಹೇಳುವುದು ಸರಿಯಲ್ಲ. ಈ ಹಿಂದಿನ ಮೂರು ತಿಂಗಳ ಬೆಂಗಳೂರು ಮಾರ್ಕೆಟ್ಟಿನಲ್ಲಿ ಇದ್ದ ಕೆಲವು ಬೆಲೆಗಳನ್ನು ನೋಡಿದಾಗ ಅವಶ್ಯಕ ಪದಾರ್ಥಗಳ ಬೆಲೆಗಳು ಇಳಿದಿವೆ ಎಂಬುದನ್ನು ಗಮನಿಸಬಹುದು. ಕಡ್ಲೆಕಾಯಿ ಎಣ್ಣೆಯ ಬೆಲೆಯನ್ನು ತೆಗೆದುಕೊಂಡು ನೋಡಿದಾಗ ಆಗಸ್ಟ್ ೧೯೮೩ರಲ್ಲಿ ಚಿಲ್ಲರೆ ಬೆಲೆ ರೂ. ೧೮.೬೦ ಇದ್ದದ್ದು ಡಿಸೆಂಬರ್ ೧೯೮೩ರಲ್ಲಿ ರೂ. ೧೪.೯೦ ಒಂದು ಕೇಜಿಗೆ ಇತ್ತು. ಇದೇ ರೀತಿ ಅಕ್ಕಿಯ ಸಗಟು ಮತ್ತು ಚಿಲ್ಲರೆ ಬೆಲೆಗಳು ಏರಿಕೆಯನ್ನು ಕಳೆದ ಮೂರು ತಿಂಗಳಿಂದ ತೋರಿಸಿಲ್ಲ.

ಕರ್ನಾಟಕ ಸರ್ಕಾರವು ಬೆಲೆಗಳನ್ನು ಹತೋಟಿಯಲ್ಲಿಡಲು ಮತ್ತು ಕಡಿಮೆ ಮಾಡಲು ಸರ್ವ ಪ್ರಯತ್ನವನ್ನು ಮಾಡುತ್ತಿದೆ. ಸಾರ್ವಜನಿಕ ವಿತರಣೆಯಲ್ಲಿ ಹಂಚುವ ಆಹಾರ ಪದಾರ್ಥಗಳ ಪ್ರಮಾಣವು ೧೯೮೩ನೇ ವರ್ಷದಲ್ಲಿ ೧೯೮೧ ಮತ್ತು ೧೯೮೨ ವರ್ಷಕ್ಕಿಂತ ಹೆಚ್ಚಾಗಿರುವುದನ್ನು ಲಗತ್ತಿಸಿದ ಪಟ್ಟಿಯಲ್ಲಿ ನೋಡಬಹುದು. ಸದ್ಯ ಸಾರ್ವಜನಿಕ ವಿತರಣೆಯಲ್ಲಿ ೩೫,೦೦೦ ಮೆಟ್ರಿಕ್ ಟನ್ ಅಕ್ಕಿಯನ್ನು ಒಂದು ತಿಂಗಳಿಗೆ ಬಿಡುಗಡೆ ಮಾಡಲಾಗುತ್ತಿದೆ, ಆದರೆ ಭಾರತ ಸರ್ಕಾರದವರು ೨೦,೦೦೦ ಮೆಟ್ರಿಕ್ ಟನ್ ಅಕ್ಕಿಯನ್ನು ಮಾತ್ರ ತಿಂಗಳಿಗೆ ಬಿಡುಗಡೆ ಮಾಡುತ್ತಿದ್ದಾರೆ. ೧೯೮೩ನೇ ವರ್ಷದಲ್ಲಿ ಪಾಮಲಿನ್ ಎಣ್ಣೆಯ ಬಿಡುಗಡೆ ಸಾಕಷ್ಟು ಹೆಚ್ಚಾಗಿದೆ. ಬೆಂಗಳೂರು ನಗರದಲ್ಲಿ ಒಂದು ಕಾರ್ಡಿಗೆ ಒಂದು ತಿಂಗಳಿಗೆ ೪ ಕೆ.ಜಿ. ಪಾಮಲಿನ್ ಎಣ್ಣೆಯನ್ನು ಹಂಚಲಾಗುತ್ತಿದೆ. ಇದರಿಂದ ಕಡ್ಲೆಕಾಯಿ ಎಣ್ಣೆಯ ಬೆಲೆಯು ಕಡಿಮೆಯಾಗಲಿಕ್ಕೆ ಸಹಾಯಕವಾಗಿದೆ. ಈ ವೇಳೆಯಲ್ಲಿ ಸರ್ಕಾರವು ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ಕಾನೂನು ಕ್ರಮಗಳನ್ನು ಬಿಗಿಯಾಗಿ ತೆಗೆದುಕೊಂಡಿದೆ. ೧೯೮೩ನೇ ವರ್ಷದಲ್ಲಿ ಅಗತ್ಯ ವಸ್ತುಗಳ ಕಾಯಿದೆಗೆ ಅನುಸಾರವಾಗಿ ೩,೪೬೧ ದಾಳಿಗಳನ್ನು ಮಾಡಿ, ೫೫೪ ಜನರನ್ನು ಬಂಧಿಸಲಾಗಿದೆ. ೨೨೦ ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ ಮತ್ತು ೬೫ ಜನರಿಗೆ ಶಿಕ್ಷೆವಿಧಿಸಲಾಗಿದೆ. ಈ ಪ್ರಕರಣಗಳಲ್ಲಿ ೪.೭೭ ಕೋಟಿ ರೂಪಾಯಿಗಳ ಅಗತ್ಯ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದರೆ ನಮಗೆ ಅಕ್ಕಿ ಸಿಕ್ಕ ಹಾಗೆ ಆಯಿತು. ಬತ್ತದ ಸೀಮೆಯಲ್ಲಿಯೇ ಐದು ರೂಪಾಯಿಗಳಿಗೆ ಕೆ. ಜಿ.ಯಂತೆ ಅಕ್ಕಿ ಮಾರಾಟ ಮಾಡುತ್ತಿದ್ದಾರೆ.

(ix) ದಳಪತಿಗಳಿಗೆ ಕೊಡುವ ಸಂಬಳದ ವಿಳಂಬ

ಶ್ರೀ ಹನುಮಂತರಾವ್ ದೇಸಾಯಿ (ಹುಮ್ನಾಬಾದ್).—೧೯೭೬ರಲ್ಲಿ ಕಾನೂನು ಪ್ರಕಾರ ರಾಜ್ಯ ಸರ್ಕಾರದವರು ದಳಪತಿಗಳನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ನೇಮಕ ಮಾಡಿದರು. ಸುಮಾರು ೭–೮ ವರ್ಷಗಳಿಂದ ಅವರು ದಳಪತಿಗಳ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಎಲ್ಲಾ ಹಳ್ಳಿಗಳಲ್ಲಿ ಇವರು ಶಾಂತಿಯನ್ನು ಕಾಪಾಡುವುದು, ರಾತ್ರಿಯೆಲ್ಲಾ ಹಳ್ಳಿಗಳಲ್ಲಿ ಗಸ್ತು ತಿರುಗಾಡುವುದು, ಏನಾದರೂ ಗೊಂದಲ ಇದ್ದರೆ ಪೋಲೀಸರಿಗೆ ರಿಪೋರ್ಟ್ ಮಾಡುವುದು ಮುಂತಾದ ಅನೇಕ ಕೆಲಸ ಕಾರ್ಯಗಳನ್ನು ನಿಷ್ಠೆಯಿಂದ ಅವರುಗಳು ಮಾಡುತ್ತಾ ಬಂದಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೧,೫೦೦ ಜನ ದಳಪತಿಗಳು, ಬೀದರ್ ಜಿಲ್ಲೆಯಲ್ಲಿ ೬೦೦ ಜನ ದಳಪತಿಗಳು ಕೆಲಸ ಮಾಡುತ್ತಿದ್ದಾರೆ. ಅಂದಿನಿಂದ ಇಂದಿನವರೆಗೂ ಇವರುಗಳು ಕೆಲಸ ಮಾಡುತ್ತಾ ಬಂದಿದ್ದರೂ ಕೂಡ, ಹಿಂದಿನ ಸರ್ಕಾರಕ್ಕೆ ಇವರ ಸಂಬಳದ ಬಗ್ಗೆ ಮನವಿಯನ್ನು ಸಲ್ಲಿಸಿದ್ದರೂ ಕೂಡ ಅವರಿಗೆ ಯಾವ ಒಂದು ಅನುಕೂಲವನ್ನು ಮಾಡಲಿಲ್ಲ. ಈ ಒಂದು ದೃಷ್ಟಿಯಿಂದ ಇವತ್ತು ಅವರು ಸಂಬಳ ಇಲ್ಲದೆ ಮತ್ತು ಬೇರೆ ಸವಲತ್ತುಗಳು ಇಲ್ಲದೆ ಬಹಳತೊಂದರೆಗೆ ಒಳಪಟ್ಟಿದ್ದಾರೆ. ಅವರು ಒಂದು ರೀತಿಯಲ್ಲಿ "ಬಿನ್ ಪಗಾರ್ ಅಧಿಕಾರಿ" ಎನ್ನುವಹಾಗೆ ಕೆಲಸ ಮಾಡುತ್ತಿದ್ದಾರೆ. ಸಂಬಳ ಇಲ್ಲ ಅಧಿಕಾರ ಮಾತ್ರ ಇದೆ, ಈ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಅವರಿಗೆ ಏನು ಸಂಬಳ ಸವಲತ್ತುಗಳು ಸಲ್ಲಬೇಕೋ ಅದನ್ನು ಜಾಗ್ರತೆಯಾಗಿ ಅವರಿಗೆ ದೊರಕುವಂತೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ದಳಪತಿಗಳ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಹನುಮಂತರಾವ್ ದೇಸಾಯಿಯವರು ಎತ್ತಿದ್ದಾರೆ. ಇದು ಬಹಳ ದಿವಸದಿಂದ ಇದ್ದಂಥ ಪ್ರಶ್ನೆ. ದಳಪತಿಗಳ ನೇಮಕಾತಿಯೇನೋ ಆಗಿ ಬಿಟ್ಟಿದೆ, ಮತ್ತು ಮೊದಲು ಇವರಿಗೆ ಯಾವ ಒಂದು ಸವಲತ್ತುಗಳು ದೊರೆಯುತ್ತಿದ್ದವೋ ಅವೂ ಸಹ ಈಗ ನಿಂತು ಹೋಗಿವೆ. ಆದರೂ ಸಹ ನಾವು ಅವರಿಂದ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ಇವರ ಬಗ್ಗೆ ಪುನರ್ ವ್ಯವಸ್ಥೆಯನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಬಹು ಬೇಗ ಒಂದು ತೀರ್ಮಾನ ಮಾಡುತ್ತದೆ.